








# ಇನ್ನಷ್ಟು ಇಂಗ್ಲಿಷ್ ಕಲಿಕೆಗೆ 'ಎಲ್ಸಾ'

**ಇಂಗ್ಲಿಷ್ ಕಲಿಕೆಯನ್ನು ಇನ್ನಷ್ಟು ಸಲೀಸು ಹಾಗೂ ಸ್ಪಷ್ಟವಾಗಿಸುವ ಎಲ್ಸಾ (ELSA) ಆ್ಯಪ್ ಈಗ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯ.**

**■ ಶಶಿಕುಮಾರ್ ಸಿ.**

ಜಾಗತಿಕ ಮಟ್ಟದಲ್ಲಿ ಅತ್ಯಂತ ಹೆಚ್ಚು ಪ್ರಚಲಿತವಾಗಿರುವ ಭಾಷೆ ಇಂಗ್ಲಿಷ್. ಆ ಭಾಷೆಯೊಂದು ಚೆನ್ನಾಗಿ ಅರಿತಿದ್ದರೆ ಸಾಕು, ಎಲ್ಲಾದರೂ ಕೆಲಸ ಗಿಟ್ಟಿಸಬಹುದು ಎಂಬ ಮಾತೂ ಇದೆ. ಆದರೆ, ಬಹುತೇಕರಿಗೆ ಇಂಗ್ಲಿಷ್ ಕಲಿಕೆಯೇ ದೊಡ್ಡ ಸವಾಲು. ಇಂಗ್ಲಿಷ್ ಕಲಿಕೆಯನ್ನು ಇನ್ನಷ್ಟು ಸಲೀಸು ಹಾಗೂ ಸ್ಪಷ್ಟವಾಗಿಸಲು ಹೊಸದಾಗಿ ಎಲ್ಸಾ (ELSA) ಆ್ಯಪ್ ಭಾರತಕ್ಕೆ ಕಾಲಿಟ್ಟಿದೆ.

ಸ್ಯಾನ್ ಫ್ರಾನ್ಸಿಸ್ಕೋದ ಈ ಆ್ಯಪ್, ಎಲ್ಲೆಡೆ ಚಾಲ್ತಿಯಲ್ಲಿರುವ ಅಮೆರಿಕನ್ ಇಂಗ್ಲಿಷ್‌ನ ಉಚ್ಚಾರಣೆಯನ್ನು ಹೇಗೆ ಮಾಡುವುದೆಂಬ ಬಗ್ಗೆ ಹೆಚ್ಚು ಕೇಂದ್ರೀಕೃತವಾಗಿದೆ. ವು ವ್ಯಾನ್ ಹಾಗೂ ಜೇವಿಯರ್ ಆ್ಯಂಗೇರ್ ಎಂಬುವವರು ಇದರ ಸಂಸ್ಥಾಪಕರು. ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಈ ಆ್ಯಪ್ ಲಭ್ಯವಿದ್ದು, ಡೌನ್‌ಲೋಡ್ ಮಾಡಿಕೊಂಡು ಬಳಸಬಹುದಾಗಿದೆ.

ಇಂಟರ್‌ನ್ಯಾಷನಲ್ ಗ್ಲೋಬಲ್ ನವೋದ್ಯಮ ಆ್ಯಪ್ ಆಗಿ 'ಎಲ್ಸಾ' ಗುರುತಿಸಿಕೊಂಡಿದ್ದು, ಭಾರತದಲ್ಲಿ ಈಗಾಗಲೇ ಚಾಲ್ತಿಯಲ್ಲಿದೆ. ಇಂಗ್ಲಿಷ್ ಕಲಿಯುವ ತರಾತುರಿಯಲ್ಲಿ ಅದರ ಉಚ್ಚಾರಣೆಯ ಬಗ್ಗೆ ಅಷ್ಟೇನೂ ಆದ್ಯತೆ ನೀಡುವುದಿಲ್ಲ. ಇದರಿಂದ ಉಚ್ಚಾರಣೆ ಸಮಸ್ಯೆ ಎದುರಾಗುತ್ತದೆ. ಹೀಗಾಗಿ, ಈ ಆ್ಯಪ್, ಇಂಗ್ಲಿಷ್ ಕಲಿಕೆಗೂ ಮಿಗಿಲಾಗಿ 'ಇಂಪ್ರೂವಿಂಗ್ ಇಂಗ್ಲಿಷ್' ಮೇಲೆ ಹೆಚ್ಚು ಕೇಂದ್ರೀಕೃತವಾಗಿದೆ.

ಅಮೆರಿಕನ್ ಇಂಗ್ಲಿಷ್ ಈಗ ಜಾಗತಿಕ ಮಟ್ಟದ ವ್ಯಾವಹಾರಿಕ ಭಾಷೆಯಾಗಿದೆ. ಬ್ರಿಟಿಷ್‌ನವರೂ ಅಮೆರಿಕನ್ ಇಂಗ್ಲಿಷ್‌ನ ಮೇಲೆ ಹೆಚ್ಚು ಆದ್ಯತೆ ನೀಡಿದ್ದಾರೆ. ಆ ಬಗ್ಗೆ ಮುಖ್ಯವಾಗಿ ಕೇಂದ್ರೀಕರಿಸಿದ್ದು, ಆರ್ಟಿಫಿಷಿಯಲ್ ಇಂಟಲಿಜೆನ್ಸ್ (ಎಐ) ತಂತ್ರಜ್ಞಾನವನ್ನೊಳಗೊಂಡಂತೆ ಈ ಆ್ಯಪ್ ಅನ್ನು ರಚಿಸಲಾಗಿದೆ.

ದೇಶದಲ್ಲಿ ಮಾತೃಭಾಷೆಗಳ ಪ್ರಭಾವವು ಹೆಚ್ಚಾಗಿದೆ. ಅದು ಇಂಗ್ಲಿಷ್ ಬಳಕೆಯಲ್ಲೂ ಕಾಣುತ್ತದೆ. ಅದನ್ನು ಸಂವಹನ (ಕಮ್ಯುನಿಕೇಷನ್) ಸಮಸ್ಯೆಯೆಂದೇ ಪರಿಗಣಿಸಲಾಗುತ್ತದೆ. ಅಂತಹ ಸಮಸ್ಯೆಗಳು ಇಂಗ್ಲಿಷ್ ಬಳಕೆಯಲ್ಲಿ ಎದುರಾಗದಂತೆ ಕಡಿತಗೊಳಿಸಲು ಈ ಆ್ಯಪ್ ಕಾರ್ಯನಿರ್ವಹಿಸುತ್ತದೆ. ಸರಿಯಾದ ಇಂಗ್ಲಿಷ್ ಬಳಸುವುದರಿಂದ ವ್ಯಾಪಾರ ಹಾಗೂ ಶೈಕ್ಷಣಿಕವಾಗಿ ಹೊಸ ಹೊಸ ಅವಕಾಶಗಳೂ ಲಭ್ಯವಾಗುತ್ತದೆ.

ಇಂಗ್ಲಿಷ್‌ನ ಬಳಕೆಯಲ್ಲಿ ಮಾತೃಭಾಷೆಯ (ಮದರ್ ಟಂಗ್) ಪ್ರಭಾವವನ್ನು ಕಡಿಮೆ ಮಾಡಿ ಅಮೆರಿಕನ್ ಇಂಗ್ಲಿಷ್‌ನ ಸ್ಪಷ್ಟ ಉಚ್ಚಾರಣೆಯನ್ನು ಯಥಾವತ್ತಾಗಿ ಬಳಸುವಂತೆ ಮಾಡಲು ನೆರವಾಗುತ್ತದೆ. ಉದಾಹರಣೆಗೆ ಕನ್ನಡ ಭಾಷೆಯ ಪ್ರಭಾವವು ನಾವು ಮಾತನಾಡುವ ಇಂಗ್ಲಿಷ್‌ನಲ್ಲಿ ಗೋಚರವಾಗುತ್ತದೆ. ಅದು ವ್ಯಾವಹಾರಿಕವಾಗಿ ಕೆಲವೊಮ್ಮೆ ತೊಡಕಾಗಬಹುದು. ಅಂತಹ ಸನ್ನಿವೇಶಗಳಿಂದ ತಪ್ಪಿಸಿಕೊಳ್ಳಲು ನಮ್ಮ ಇಂಗ್ಲಿಷ್ ಭಾಷೆಯ ಮೇಲಿನ ಹಿಡಿತವನ್ನು ಇದು ಮತ್ತಷ್ಟು ಬಲಗೊಳಿಸುತ್ತದೆ.

ಈ ಆ್ಯಪ್‌ಗೆ ಪ್ರಾರಂಭಿಕವಾಗಿ ಸೈನ್ ಇನ್ ಆದಾಗ, ನೇಟಿವ್ ಲ್ಯಾಂಗ್ವೇಜ್‌ನ ಕಿರು ಸಮೀಕ್ಷೆಯನ್ನು ಮಾಡುತ್ತದೆ. ಆ ಸರ್ವೆಗೆ ನಾವು ನೀಡುವ ಪ್ರತಿಕ್ರಿಯೆಯನ್ನು ಆಧರಿಸಿ ನಮ್ಮ ಇಂಗ್ಲಿಷ್ ಭಾಷೆಯ ಉಚ್ಚಾರಣೆ ಯಾವ ಹಂತದಲ್ಲಿದೆ, ಅದನ್ನೂ ಹೇಗೆ ಇನ್ನೂ ಉತ್ತಮಗೊಳಿಸಬಹುದು ಎಂಬುದರ ಬಗ್ಗೆ ಆರ್ಟಿಫೀಷಿಯಲ್ ಇಂಟಲಿಜೆನ್ಸ್ ತಂತ್ರಜ್ಞಾನದ ಮೂಲಕ ಪರಿಹಾರ ಒದಗಿಸುತ್ತದೆ.

ಇದು ತುಂಬಾ ಇಂಟರ್‌ಆ್ಯಕ್ಟೀವ್ ಆ್ಯಪ್ ಆಗಿದ್ದು, ಇಂಗ್ಲಿಷ್ ಭಾಷೆಯ ಮೇಲೆ ಸಂಶೋಧನೆ ಮಾಡಿ ರೂಪಿಸಲಾಗಿದೆ. ಗೇಮಿಂಗ್ ಆ್ಯಪ್‌ಗಳ ರೂಪದ ಈ ಆ್ಯಪ್ ಬಳಕೆದಾರರಿಗೆ, ಅವರ ಭಾಗವಹಿಸುವಿಕೆ ಆಧಾರದ ಮೇಲೆ ಅಂಕಗಳನ್ನು ನೀಡಿ, ವಿವಿಧ ಹಂತಗಳಿಗೆ ಬಡ್ತಿ ನೀಡಲಾಗುತ್ತದೆ. ಅಂಕಗಳು ಹಾಗೂ ಹಂತಗಳನ್ನು ಅವಲೋಕಿಸಿ ಮೊದಲ ಹಂತದಲ್ಲಿ ಇರುವವರಿಗೆ, ತಿಂಗಳಿಗೊಮ್ಮೆ ಲ್ಯಾಪ್‌ಟಾಪ್, ಮೊಬೈಲ್ ಇನ್ನಿತರ ವಸ್ತುಗಳನ್ನು ಉಡುಗೊರೆಯಾಗಿ ಬಳಕೆದಾರರಿಗೆ ನೀಡಲಾಗುತ್ತದೆ. ಇದೇ ಡಿಸೆಂಬರ್ 1ಕ್ಕೆ ಎಲ್ಸಾ ಸ್ಪೀಕ್ ಪ್ರೀಮಿಯರ್ ಲೀಗ್ ಅನ್ನೂ ಬಿಡುಗಡೆ ಮಾಡಲಾಗುತ್ತಿದೆ.

ಇಂಗ್ಲಿಷ್ ಬಾರದವರ ನೆರವಿಗೆ ಈ ಆ್ಯಪ್ ನಿಲ್ಲುತ್ತದೆ. ಇದರಲ್ಲಿನ ಬೇಸಿಕ್ ಇಂಟರ್‌ಫೇಸ್ ತುಂಬಾ ಸುಲಭವಾಗಿದೆ. ಆ್ಯಪ್‌ಗೆ ಒಮ್ಮೆ ಸೈನ್ ಇನ್ ಮಾಡಿದರೆ, ದೈನಂದಿನ ಸಂಭಾಷಣೆ, ಸಿಂಪಲ್ ವರ್ಡ್ಸ್, ಅವುಗಳನ್ನು ಉಚ್ಚರಿಸುವ ವಿಧಾನ, ವಾಕ್ಯಗಳಲ್ಲಿ ಆ ಪದಗಳನ್ನು ಹೇಗೆ ಉಪಯೋಗಿಸುವುದು ಎಂಬುದನ್ನು ಸುಲಭವಾಗಿ ಅರಿಯುವಂತೆ ತಿಳಿಸುತ್ತದೆ.

ವಿದೇಶಕ್ಕೆ ಹೋಗಿ ನೆಲೆಸುವವರಿಗೆಲ್ಲ ಇಂಗ್ಲಿಷ್ ಗೊತ್ತಿರಬೇಕು. ಅದಕ್ಕೆ ಸಂಬಂಧಪಟ್ಟಂತೆ ಕೆಲವೊಂದು ಟೆಸ್ಟ್‌ಗಳನ್ನು ನಡೆಸಲಾಗುತ್ತದೆ. ಆ ಟೆಸ್ಟ್‌ಗಳಿಗೆ ಸಂಬಂಧಪಟ್ಟಂತಹ ಎಲ್ಲ ರೀತಿಯ ಚಾಪ್ಟರ್ ಹಾಗೂ ಮಾಡ್ಯುಲ್ಸ್‌ಗಳ ಮಾದರಿಗಳು ಈ ಆ್ಯಪ್‌ನಲ್ಲಿ ಲಭ್ಯ. ಇಂಗ್ಲಿಷ್‌ಗೆ ಸಂಬಂಧಪಟ್ಟಂತೆ ಈ ಆ್ಯಪ್‌ನಲ್ಲಿ ಸುಮಾರು 22 ಮಾಡ್ಯುಲ್ಸ್‌ಗಳು ಲಭ್ಯ. ಅವುಗಳೆಲ್ಲವೂ ಧ್ವನಿ ರೂಪದಲ್ಲೂ ಲಭ್ಯ. ಓದಲು ಅಷ್ಟಾಗಿ ಬಾರದವರಿಗೆ ಅನುಕೂಲವಾಗಲೆಂದು ವಾಯ್ಸ್ ಮಾಡ್ಯುಲ್ಸ್ ಆಯ್ಕೆ ನೀಡಲಾಗಿದೆ. ಅದನ್ನು ಕ್ಲಿಕ್ಕಿಸಿದರೆ ಮಾಡ್ಯುಲ್ಸ್‌ಗಳಲ್ಲಿನ ಮಾಹಿತಿ ಕೇಳುತ್ತದೆ. ವಾಯ್ಸ್ ಫೀಡ್‌ಬ್ಯಾಕ್ ಲಭ್ಯವಿದ್ದು, ನಾವು ಸರಿಯಾಗಿ ಉಚ್ಚಾರಣೆ ಮಾಡುತ್ತಿದ್ದೇವೆಯೋ ಇಲ್ಲವೋ ಎಂಬುದನ್ನೂ ಅದು ತಿಳಿಸುತ್ತದೆ. ■